## “ನಾನು ಪಠ್ಯಕ್ರಮ ಮತ್ತು ಪಠ್ಯಪುಸ್ತಕದ ಯಜಮಾನಿ”

**ಶಿಖಾ ಗಂಗ್ವಾರ್**

ಸರ್ಕಾರಿ ಪ್ರಾಥಮಿಕ ಶಾಲೆ, ಮಹಾರಾಜಪುರ ಬ್ಲಾಕ್–ರುದ್ರಪುರ
ಉಧಮ್‌ಸಿಂಗ್ ನಗರ ಜಿಲ್ಲೆ, ಉತ್ತರಾಖಂಡ್

ಶಿಖಾ ಗಂಗ್ವಾರ್ ಅವರು ಶಿಕ್ಷಕರಾಗಿ ತಾವು ಸಾಗಿದ ಹಾದಿಯ ಬಗ್ಗೆ ಬಿಚ್ಚು ಮನಸ್ಸಿನಿಂದ ಮಾತನಾಡುತ್ತಾರೆ. ಅವರು ಹೊರಟದ್ದು ಎಲ್ಲಿಂದ ಮುಂದೆ ಏನು ಸಾಧಿಸಲು ಶ್ರಮಿಸುತ್ತಿದ್ದಾರೆ ಎಂಬುದನ್ನು ಹಂಚಿಕೊಂಡರು. ವೃತ್ತಿ ಸಂಬಂಧವಾಗಿ ಹಲವು ವರ್ಷಗಳಿಂದ ತಿಳಿದಿರುವ ವ್ಯಕ್ತಿಯೊಬ್ಬರು ತನ್ನೊಡನೆ ಇದ್ದರು ಎಂಬುದರಿಂದ ಶಿಖಾ ನನ್ನೊಡನೆ ಶಿಕ್ಷಕಿಯಾಗಿ ತಮ್ಮ ಯಾತ್ರೆಯ ಬಗ್ಗೆ ಬಿಚ್ಚು ಮನಸ್ಸಿನಿಂದ ಮಾತನಾಡಿದರು

ಎಂದು ಯಾರಾದರೂ ಹೇಳಬಹುದೇನೋ; ಆದರೆ ಅವರು ಸ್ವಭಾವತಃ ಬಿಚ್ಚು ಮನಸ್ಸಿನವರು, ನಾನೊಬ್ಬನೇ ಬಂದು ಅವರನ್ನು ಭೇಟಿಯಾಗಿದ್ದರೂ ಅವರು ಹಾಗೆಯೇ ಮಾತನಾಡುತ್ತಿದ್ದರು ಎಂದು ನಮ್ಮ ಮಾತುಕತೆಯ ಕೊನೆಗೆ ನನಗೆ ಅನಿಸಿತು.

ಶಿಖಾ ಎಂ.ಎ. ಹಾಗೂ ಬಿ.ಎಡ್. ಮುಗಿಸಿದ್ದಾರೆ. ಅವರ ಗಂಡ 1997ರಲ್ಲಿ ದಿನೇಶ್‌ಪುರದ ಒಂದು ಮಾಧ್ಯಮಿಕ ಶಾಲೆಯಲ್ಲಿ ಗಣಿತ ಶಿಕ್ಷಕರು. ಅವರ ತಾಯಿ, ಶಿಖಾರ ಅತ್ತೆ ಅನಾರೋಗ್ಯ ಪೀಡಿತರಾದುದರಿಂದ ಅವರ ಆರೈಕೆಗಾಗಿ ಶಿಖಾ ಅವರು ರುದ್ರಪುರದಲ್ಲೇ ನೆಲೆಸಬೇಕಾಯಿತು. ಅವರು ಅಲ್ಲೇ ಒಂದು ಖಾಸಗಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡತೊಡಗಿದರು. ಶಿಕ್ಷಕರ ಕರ್ತವ್ಯ ಪಠ್ಯಕ್ರಮವನ್ನು ಯಾಂತ್ರಿಕವಾಗಿ ಮುಗಿಸುವುದು ಎಂಬ ಕಲ್ಪನೆ ತಮ್ಮಲ್ಲಿ ಅನೇಕ ವರ್ಷಗಳ ಕಾಲ ಇತ್ತು; ತಾನು ಪಠ್ಯಪುಸ್ತಕದ ಬಂಧಿಯಾಗಿದ್ದೆ ಎಂದು ಅವರು ಒಪ್ಪಿಕೊಳ್ಳುತ್ತಾರೆ. 2006ರಲ್ಲಿ ವಿಶಿಷ್ಟ ಬಿಟಿಸಿ (ಬೇಸಿಕ್ ಟೀಚಿಂಗ್ ಸರ್ಟಿಫಿಕೇಟ್– ಬಿ.ಟಿ.ಸಿ.) ಮಾಡಿಕೊಂಡು ಶಿಕ್ಷಣ ಇಲಾಖೆಯನ್ನು ಸೇರಿದರು. ಮೂರು ವರ್ಷಗಳ ನಂತರ ಮಹಾರಾಜಪುರದ ಈ ಪ್ರಾಥಮಿಕ ಶಾಲೆಗೆ ವರ್ಗಾವಣೆಯಾಗಿ ಬಂದರು. ರುದ್ರಪುರದಿಂದ ಮಹಾರಾಜಪುರ ಸಾಕಷ್ಟು ದೂರವಿದೆ. ಅವರು ಬಸ್ಸಿನಲ್ಲಿ ಹೋಗಿ ಕೊನೆಯ ಎರಡು ಕಿ.ಮೀ.ಗಳನ್ನು ಕಾಲ್ನಡಿಗೆಯಿಂದ ಕ್ರಮಿಸಬೇಕಿತ್ತು. ಇದು ಬಲು ತ್ರಾಸದಾಯಕವೆಂದು ಕಂಡುಕೊಂಡ ಶಿಖಾ ಅವರು ತಮ್ಮ ನಲವತ್ತನೇ ವಯಸ್ಸಿನಲ್ಲಿ ಸ್ಕೂಟಿ ಓಡಿಸುವುದನ್ನು ಕಲಿತು ಒಂದು ಸ್ಕೂಟರ್ ಖರೀದಿ ಮಾಡಿದರು.

ಮಹಾರಾಜಪುರವು ಸುಮಾರು ಒಂದು ಸಾವಿರಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿರುವ ಒಂದು ದೊಡ್ಡ ಹಳ್ಳಿ. ಎಲ್ಲ ಊರುಗಳಂತೆ ಇಲ್ಲಿಯೂ ಶ್ರೀಮಂತರು ಮಕ್ಕಳನ್ನು ಖಾಸಗಿ ಶಾಲೆಗೂ ಬಡವರು ಸರ್ಕಾರಿ ಶಾಲೆಗೂ ಕಳಿಸುತ್ತಾರೆ. ಈ ಬಡವರಲ್ಲಿ ಹೆಚ್ಚಿನವರು ಕೃಷಿ ಕೂಲಿಕಾರರು, ಕಾರ್ಖಾನೆ ಕಾರ್ಮಿಕರು, ದಿನಗೂಲಿಯವರೂ ಆಗಿದ್ದಾರೆ. ಇಲ್ಲಿನ ಸರ್ಕಾರಿ ಶಾಲೆ ಸಾಕಷ್ಟು ಸ್ಥಳಾವಕಾಶವನ್ನು ಹೊಂದಿದ್ದು ಅಚ್ಚುಕಟ್ಟಾಗಿ ಇದೆ. ನಾಲ್ಕು ತರಗತಿ ಕೊಠಡಿಗಳು, ಒಂದು ಜಗಲಿ, ಹಾಗೂ ಇನ್ನೊಂದು ಕಚೇರಿಸಿಬ್ಬಂದಿ ಕೊಠಡಿಯೂ ಆಗಿದೆ. ಒಂದನೇ ತರಗತಿಯ ಕೊಠಡಿಯಲ್ಲಿ ವಾಚನಾಲಯಕ್ಕೆ ವ್ಯವಸ್ಥೆ ಮಾಡಲಾಗಿದೆ. 'ಇದೊಂದು ಒಳ್ಳೆಯ ಊರು, ಪೋಷಕರು ನಮಗೆ ಬೆಂಬಲ ಕೊಡುತ್ತಾರೆ' ಎಂದು ಶಿಖಾ ಹೇಳುತ್ತಾರೆ. ಒಟ್ಟು 160 ಮಕ್ಕಳಿದ್ದು 90 ಮಂದಿ ಹುಡುಗಿಯರು ಹಾಗೂ 70 ಹುಡುಗರು. ಮುಖ್ಯೋಪಾಧ್ಯಾಯಿನಿಯೂ ಸೇರಿ ನಾಲ್ವರು ಶಿಕ್ಷಕರಿದ್ದಾರೆ. ಶಿಖಾ ಮೂರನೇ ತರಗತಿಗೆ ಎಲ್ಲಾ ವಿಷಯಗಳನ್ನೂ ನಾಲ್ಕನೇ ತರಗತಿಗೆ ಪರಿಸರ ವಿಜ್ಞಾನವನ್ನೂ ಬೋಧಿಸುತ್ತಾರೆ. 'ಇಲ್ಲಿ ನಮ್ಮಲ್ಲಿ ಪರಸ್ಪರ ತಿಳಿವಳಿಕೆಯೂ ಏಕತೆಯೂ ಇದೆ. ಅದೊಂದು ಬಲು ಒಳ್ಳೇ ವಿಚಾರ. ಆದರೆ ವಿದ್ಯಾರ್ಥಿ–ಶಿಕ್ಷಕ ಅನುಪಾತ ಮಾತ್ರ ಪ್ರತಿಕೂಲವಾಗಿರುವುದು ಒಂದು ಸಮಸ್ಯೆಯೇ ಸರಿ. ಜೊತೆಗೆ ಶೈಕ್ಷಣಿಕೇತರ ಕೆಲಸಗಳೂ ನಮಗಿವೆ' ಎಂದರು ಶಿಖಾ. ಅವರ ವೃತ್ತಿಜೀವನದ ಕವಲುದಾರಿ, ಅಂದರೆ ಬೋಧನೆಯ ಕುರಿತಾದ ಸಂಪೂರ್ಣ ಬೇರೆಯೇ ದಾರಿಯ ಅರಿವು ಅವರಿಗೆ

ದೊರೆತದ್ದು ರುದ್ರಪುರದಲ್ಲಿ ಜರುಗಿದ ಕಾರ್ಯಾಗಾರದಲ್ಲಿ. ಅಂದು ಅಲ್ಲಿ ಫೌಂಡೇಶನ್ ವತಿಯಿಂದ ಗಣಿತ ಹಾಗೂ ಸಮಾಜ ವಿಜ್ಞಾನದ ಬೋಧನೆಯ ವಿಷಯದಲ್ಲಿ ನಡೆದ ಕಾರ್ಯಾಗಾರದಲ್ಲಿ ಭಾಗವಹಿಸುವಂತೆ ಶಿಖಾ ಅವರನ್ನು ಫೌಂಡೇಶನ್ ಪ್ರತಿನಿಧಿಯೂ ಕ್ಲಸ್ಟರ್ ಸಂಪನ್ಮೂಲ ಸಮನ್ವಯಕಾರರೂ ಆದ ಅಮಿತ್ ಕೇಳಿಕೊಂಡರು. 'ಆ ಕಾರ್ಯಾಗಾರ ನನ್ನ ಕಣ್ಣುಗಳನ್ನು ತೆರೆಯಿಸಿತು. ಬೋಧನೆಯು ಏಕಮುಖ ಮಾರ್ಗವಲ್ಲ ಎಂಬುದು ನನಗೆ ತಿಳಿಯಿತು. ಪಠ್ಯಕ್ರಮವೂ ಪಠ್ಯಪುಸ್ತಕಗಳೂ ನನ್ನ ಒಡೆಯರಲ್ಲ; ನಾನೇ ಅವುಗಳ ಒಡತಿ ಎಂಬುದು ಸ್ಪಷ್ಟವಾಯಿತು' ಅನ್ನುತ್ತಾರೆ ಶಿಖಾ. 'ಒಂದು ಉದಾಹರಣೆ ಹೇಳಿ' ಎಂದಾಗ, 'ಹಿಂದೆಲ್ಲ 'ನನ್ನ ಕುಟುಂಬ', ನನ್ನ ಮನೆ' ಮುಂತಾದ ವಿಷಯಗಳು ಬಂದಾಗ ನಾನು ಅವುಗಳನ್ನು ಕರಿ ಹಲಗೆಯಲ್ಲಿ ಬರೆಯುತ್ತಿದ್ದೆ. ಮಕ್ಕಳು ಅದನ್ನು ಬರೆದುಕೊಳ್ಳುತ್ತಿದ್ದರು. ಮಕ್ಕಳು ಅವಕ್ಕೆ ಸಂಬಂಧಿಸಿ ಕೆಲವು ಮಾಮೂಲಿ ಉತ್ತರಗಳನ್ನು ಸಿದ್ಧಪಡಿಸಿ ಬರೆಯುತ್ತಿದ್ದರು. ಆದರೆ ಈಗ ನಾನು ಪ್ರತಿಯೊಂದು ಪ್ರಶ್ನೆಯನ್ನೂ ಮಕ್ಕಳು ಅವರ ಜೀವನಕ್ಕೆ ಸಂಬಂಧಿಸಿ ಅರ್ಥಮಾಡಿಕೊಂಡು ಉತ್ತರ ಬರೆಯುವಂತೆ ಮಾಡುತ್ತೇನೆ. ಈ ಮೂಲಕ ಮಕ್ಕಳ ಜ್ಞಾನದ ವಿಸ್ತರಣೆಯಾಗುತ್ತದೆ. ಈಗ 'ನನ್ನ ಕುಟುಂಬ', 'ನನ್ನ ಮನೆ'ಯಂತಹ ಪ್ರಶ್ನೆಗಳು ಮಕ್ಕಳಲ್ಲಿ ಶೋಧಕ ಬುದ್ಧಿಯನ್ನು ಬೆಳೆಸುತ್ತಿವೆ; ಅವರು ಪೋಷಕರೊಡನೆಯೂ ಸಂಬಂಧಿಕರೊಡನೆಯೂ ಚರ್ಚಿಸಿ ಒಂದು ರೀತಿಯ ಸಮೀಕ್ಷೆಯನ್ನು ನಡೆಸಿ ಉತ್ತರ ಸಿದ್ಧಪಡಿಸುತ್ತಾರೆ. ಈ ಮೂಲಕ ಅಭಿವ್ಯಕ್ತಿ ಸಾಮರ್ಥ್ಯವೂ ಬೆಳೆಯುತ್ತಿದೆ. ಅವರು ಈಗ ವಾಕ್ಯಗಳನ್ನು ರಚಿಸುತ್ತಾರೆ, ಚಿತ್ರಗಳನ್ನೂ ಬರೆಯುತ್ತಾರೆ. ನಾನು ಅವರಿಗೆ ಕೆಲವು ವಾಕ್ಯಗಳನ್ನು ಕೊಟ್ಟು ಕತೆಯನ್ನು ರಚಿಸಲು ಹೇಳಿದರೆ ಅವರು ಅದನ್ನು ಮಾಡುತ್ತಾರೆ ಇದರಿಂದ ಅವರ ಸೃಜನಾತ್ಮಕ ಶಕ್ತಿಯು ಅವರ ಬೌದ್ಧಿಕ ಪ್ರಕ್ರಿಯೆಯಲ್ಲಿ ಮಿಳಿತವಾಗಿ ಬೆಳವಣಿಗೆ ಹೊಂದುತ್ತದೆ' ಎಂದು ಶಿಖಾ ಹೇಳುತ್ತಾರೆ. ಇವೆಲ್ಲ ಚಟುವಟಿಕೆಗಳಿಂದ ಅವರಿಗೆ ಕೆಲಸದ ಹೊರೆ ಜಾಸ್ತಿಯಾಗುತ್ತದೆ ಎಂಬುದನ್ನು ನಾವು ಗಮನಿಸಬೇಕು, ಆದರೆ ಅವರು ಅದನ್ನು ಲೆಕ್ಕಿಸುವುದಿಲ್ಲ. ಶಿಖಾ ಅವರು ಆಯ್ದುಕೊಂಡಿರುವ ಈ ಮಾರ್ಗದ ದೆಸೆಯಿಂದ ಅವರಿಗೆ ಬೋಧನಾ ಯೋಜನೆಯ ರಚನೆ ನಿರ್ಣಾಯಕವೆನಿಸುತ್ತದೆ. ಅವರ ತರಗತಿಯು ಹೊಂದಿರುವ ವೈವಿಧ್ಯದ ಕಾರಣದಿಂದಾಗಿ ಬೋಧನಾ ಯೋಜನೆಯ ತಯಾರಿಯಲ್ಲಿ ಹೆಚ್ಚು ಕಾಲವನ್ನು ವ್ಯಯಿಸಬೇಕಾಗಿದೆ. ಚುರುಕಾದ ವಿದ್ಯಾರ್ಥಿಗಳಿಗೆ ಹೆಚ್ಚು ಸವಾಲಿನ ಕೆಲಸಗಳನ್ನು ಕೊಟ್ಟು ಮಿಕ್ಕವರ ಅರಿವಿನ ಬುನಾದಿಯನ್ನು ಬಲಪಡಿಸುವ ಕಾರ್ಯವನ್ನು ತಾಳ್ಮೆಯಿಂದ ಮಾಡುತ್ತಾರೆ. ಬೇರೆ ಬೇರೆ ವಿಷಯಗಳಿಗೆ ತಮ್ಮ ವಿಧಾನ ಬೇರೆ ಬೇರೆ ರೀತಿಯದ್ದೂ ನಮ್ಮವೂ ಆಗಿರಬೇಕು ಎಂದು ಅವರೆನ್ನುತ್ತಾರೆ. ಈ ವ್ಯತ್ಯಾಸವನ್ನು ಅವರಂತೆಯೇ ಅವರ ಶಾಲೆಯನ್ನು ಸಂದರ್ಶಿಸುವವರೂ ಅಲ್ಲಿ ಕಾಣಬಹುದಾಗಿದೆ. ಆ ಮಕ್ಕಳು ಪದ ಸಮಸ್ಯೆಯನ್ನು ಸುಲಭವಾಗಿ ಅರ್ಥಮಾಡಿಕೊಂಡು ಬಿಡಿಸುತ್ತಾರೆ. ಅವರು ಗಣಿತದ ಭಾಷೆಯನ್ನು ತಿಳಿದುಕೊಂಡಿದ್ದಾರೆ ಎಂಬುದಕ್ಕೆ ಅದುವೇ ನಿದರ್ಶನ. 'ಇಬರ್ತಿ ಸವಾಲ್ ಹಮಾರೇ ಲಿಯೇ ಬಹುತ್ ಇಂಪಾರ್ಟೆಂಟ್ ಹೆ' ಅನ್ನುತ್ತಾ ಶಿಖಾ ಅವರು

ಗಣಿತದ ಸಮಸ್ಯೆಗಳನ್ನು ಪದಗಳಲ್ಲಿ ಹೇಳುವ ಈ ಪದ್ಧತಿಯನ್ನು ವಿವರಿಸಿದರು. ಅವರ ತರಗತಿಯ ಮಕ್ಕಳಿಗೆ ಮಾತನಾಡಲು ಅಳುಕು ಇರಲಿಲ್ಲ. ವಿಷಯದ ಕುರಿತು ತಾವು ತಿಳಿದುಕೊಂಡದ್ದನ್ನು ವಾಕ್ಯಗಳಲ್ಲಿ ಹೇಳುವ ಸಾಮರ್ಥ್ಯವೂ ಅವರಿಗಿತ್ತು. ಮಕ್ಕಳ ಈ ಸಾಮರ್ಥ್ಯದ ಬಗ್ಗೆ ನಾವು ಶಿಖಾರಲ್ಲಿ ಹೇಳಿದಾಗ ಅವರು ಅಭಿಮಾನ ಪಡುತ್ತ "ನಮಗೆ ಈ ಮಕ್ಕಳ ಸಾಧನೆಯನ್ನು ಹೊರಗಿನವರ ಮುಂದೆ ಪ್ರದರ್ಶಿಸಬೇಕಾದ ಅಗತ್ಯವೇನೂ ಇಲ್ಲ. ನಮಗೆ ಇದು ತಿಳಿದಿರುವ ಸಂಗತಿಯೇ; ಪ್ರತಿ ದಿನವೂ ನಾವು ಅದನ್ನು ಕಾಣುತ್ತಿದ್ದೇವೆ. ನಮಗೆ ನಿರಂತರ ಸಮಗ್ರ ಮೌಲ್ಯಮಾಪನದ (ಸಿಸಿಇ) ಮೇಲೆ ಸಂಪೂರ್ಣ ಹಿಡಿತವಿದೆ. ಆದರೂ ಒಟ್ಟು ನೂರಾ ಅರವತ್ತು ಮಕ್ಕಳಲ್ಲಿ ಮೂವತ್ತರಿಂದ ಮೂವತ್ತೈದು ಮಕ್ಕಳ ಹಾಜರಾತಿ ನಿಯಮಿತವಾಗಿ ಇಲ್ಲ. ಪರಿಣಾಮವಾಗಿ ಅವರ ಶೈಕ್ಷಣಿಕ ಬೆಳವಣಿಗೆ ಕುಂಠಿತವಾಗಿದೆ. ನನಗೆ ಇದಕ್ಕಿಂತ ಹೆಚ್ಚು ನೋವು ಕೊಡುವ ವಿಷಯ ಬೇರೆ ಇದೆ; ಕೆಲವು ಮಕ್ಕಳು ತಪ್ಪದೆ ಶಾಲೆಗೆ ಬರುತ್ತಿದ್ದರೂ, ನಾವು ಅವರ ಬಗ್ಗೆ ಸಾಕಷ್ಟು ಗಮನ ಹರಿಸುತ್ತಿದ್ದರೂ ಅವರಲ್ಲಿ ಬೆಳವಣಿಗೆ ಕಾಣಿಸದೇ ಇರುವುದು. ಇದು ನನ್ನ ವೈಫಲ್ಯವೆಂದೇ ನಾನು ಭಾವಿಸುತ್ತೇನೆ. ಆದ್ದರಿಂದಲೇ ನಾನು ಪ್ರತಿದಿನವೂ ಶಾಲೆಗೆ ಹೊಸ ಚೈತನ್ಯದೊಡನೆ ಬರಬೇಕು ಅಂದುಕೊಳ್ಳುತ್ತೇನೆ" ಎಂದು ತಮ್ಮ ಮನದಾಳದ ನೋವನ್ನೂ ಬಿಚ್ಚಿಟ್ಟರು.

ಇಲ್ಲಿಗೆ ಬಂದು ಮಹಾರಾಜಪುರ ಶಾಲೆಯ ಶಿಖಾ ಗಂಗ್ವಾರ್ ಎಂಬ ಶಿಕ್ಷಕಿಯೊಡನೆ ನಡೆಸಿದ ಮಾತುಕತೆ ಹೊಸ ವಿಧಾನಗಳೊಂದಿಗೆ ಕೆಲಸ ಮಾಡುತ್ತಿರುವ ಒಬ್ಬಾಕೆ ಶ್ರದ್ಧಾಳು ಶಿಕ್ಷಕಿಯ ಅನುಭವಗಳ ಸಮೃದ್ಧ ಬುತ್ತಿಯನ್ನು ನಮಗೆ ಕಟ್ಟಿಕೊಟ್ಟಿತು. ಪ್ರತಿದಿನವೂ ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳಬೇಕು ಎಂಬ ಅವರ ನಿಷ್ಠೆ ಮತ್ತು ಎಚ್ಚರ ಅಪರೂಪವಾಗಿ ಕಾಣಿಸುವ ಗುಣವಿಶೇಷವೇ ಸರಿ.

---